PW – 1

ದಿನಾಂಕಃ 06.08.2025 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ –

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ನಿಪಿ–7 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–7 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದ –

ನಿಪಿ–7 ರಲ್ಲಿ ರೋಗಿಯ ಸಹಿ ಇಲ್ಲ ಎಂದರೆ ಸರಿ. ಬಾಪೂಜಿ ಡೆಂಟಲ್ ಕಾಲೇಜು ಆಸ್ಪತ್ರೆಯಲ್ಲಿ ಡಾಃ ಕೀರ್ತಿ ಕುಮಾರ್ ರಾಯ್ ಮತ್ತು ಡಾಃ ಪ್ರಜ್ವಲ್ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ್ದಾರೆ ಎಂದರೆ ಸರಿ. ನಿಪಿ–8 ರಲ್ಲಿ ಅನುಸಾರಣಾ ಚಿಕಿತ್ಸೆ ನೀಡಿದ ಬಗ್ಗೆ ಯಾವುದೇ ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರನಿಗೆ ನಾನು ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ಬಾಪೂಜಿ ಡೆಂಟಲ್ ಕಾಲೇಜು ಆಸ್ಪತ್ರೆ ಇಂದಿಗೂ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ಸದರಿ ವೈದ್ಯರು ಅರ್ಜಿದಾರನನ್ನು ಮುಂದಿನ ಚಿಕಿತ್ಸೆಗಾಗಿ ಅಥವಾ ಅಂಗನ್ಯೂನತೆ ಪ್ರಮಾಣ ಪತ್ರ ನೀಡಲು ನನ್ನ ಬಳಿ ಕಳಿಸಿರುವುದಿಲ್ಲ. ನಿಪಿ–8 ರ ಪ್ರಕಾರ ಅರ್ಜಿದಾರ ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ಬಿಡುಗಡೆ ಹೊಂದಿರುವುದಿಲ್ಲ. ಅಲ್ಲಿನ ಚಿಕಿತ್ಸೆಗೆ ಅವರು ಸ್ಪಂದಿಸಿದ್ದಾರೆ ಎಂದರೆ ಸರಿ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನತೆ ಇಲ್ಲದೇ ಇದ್ದರೂ ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖಖ ವಿಚಾರಣೆ ಮತ್ತು ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ಅರ್ಜಿದಾರನಿಗೆ ತೊಂದರೆಗಳಿವೆ ಎಂದು ಸುಳ್ಳು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಅವರ ಮೂಳೆ ವಕ್ರವಾಗಿ ಕೂಡಿದೆ ಎಂದು ಸುಳ್ಳು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಎಸ್ ಎಸ್ ಆಸ್ಪತ್ರೆಯ ಕ್ಷಕಿರಣ ತಜ್ಞರಿಂದ ಮೂಳೆ ವಕ್ರವಾಗಿ ಕೂಡಿಕೊಂಡ ಬಗ್ಗೆ ವರದಿ ಪಡೆದುಕೊಂಡಿಲ್ಲ.

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ –

3 ನೇ ಎದುರುದಾರರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ